ಬೆಳಗಿನ ಜಾವ 2 ಗಂಟೆಯಿಂದ 6 ಗಂಟೆಯವರೆಗೆ	ಸಿಂಗಲ್ ಫೇಸ್‌ನಲ್ಲಿ ವಿದ್ಯುತ್ ಸರಬರಾಜು	3 ಫೇಸ್‌ನಲ್ಲಿ ವಿದ್ಯುತ್ ಸರಬರಾಜು.

ಆ) ಸದ್ಯದ ಪರಿಸ್ಥಿತಿಯಲ್ಲಿ ಗ್ರಾಮಾಂತರ ಪ್ರದೇಶಗಳಲ್ಲಿ ಲೋಡ್ ಶೆಡ್ಡಿಂಗ್‌ನ ನಿರ್ವಹಣೆ ಅನಿವಾರ್ಯವಾಗಿದೆ. ವಿದ್ಯುತ್ ಬೇಡಿಕೆಯನ್ನು ವಿದ್ಯುತ್‌ಯೊಂದಿಗೆ ಸರಿದೂಗಿಸಲು ಲೋಡ್‌ಶೆಡ್ಡಿಂಗನ್ನು ನಿರ್ವಹಿಸಬೇಕಾಗಿದೆ. ಆದಾಗ್ಯೂ, ವಿದ್ಯುತ್ ಲಭ್ಯತೆಯ ಪ್ರಮಾಣನ್ನು ಹೆಚ್ಚಿಸಿಕೊಳ್ಳುವ ಸಲುವಾಗಿ ನೆರೆ ರಾಜ್ಯವಾದ ಮಹಾರಾಷ್ಟ್ರದಿಂದ ವಿದ್ಯುತ್ ನೆರವನ್ನು ಪಡೆಯಲು ಪ್ರಯತ್ನ ಮಾಡಲಾಗುತ್ತಿದೆ.

ತುಂಗಾ ಮೇಲ್ದಂಡೆ ಯೋಜನೆ

2 (107)

ಶ್ರೀ ಯು.ಬಿ.ಬಣಕಾರ್ (ಹಿರೇಕೆರೂರು): ಮಾನ್ಯ ಬೃಹತ್ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಂಗಾ ಮೇಲ್ದಂಡೆ ಯೋಜನೆಯಲ್ಲಿ ಪ್ರಸ್ತುತ ಏನು ಬದಲಾವಣೆ ಮಾಡಲಾಗಿದೆ, ಇದರಿಂದ ಯೋಜನೆಯ ವೆಚ್ಚದಲ್ಲಿ ಆಗಿರುವ ಬದಲಾವಣೆ ಎಷ್ಟು?

ಆ) ಬದಲಾವಣೆಯ ಯೋಜನೆ ಈಗ ಯಾವ ಹಂತದಲ್ಲಿದೆ?

ಇ) 1997-98ನೇ ಸಾಲಿನಲ್ಲಿ ಯಾವ ಯಾವ ಕೆಲಸಕ್ಕೆ ಎಷ್ಟು ಹಣ ನಿಗದಿಪಡಿಸಲಾಗಿತ್ತು, 31-1-98 ರವರೆಗೆ ಬಿಡುಗಡೆಗೊಂಡ ಹಾಗೂ ಖರ್ಚಾದ ಹಣ ಎಷ್ಟು?

ಈ) ಈ ಯೋಜನೆಯಿಂದ ಹಿರೇಕೆರೂರು ತಾಲ್ಲೂಕಿನಲ್ಲಿ ಯಾವ ಯಾವ ಗ್ರಾಮಗಳಲ್ಲಿ ಎಷ್ಟು ಎಕರೆ ನೀರಾವರಿ ಆಗುತ್ತದೆ?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಮಂತ್ರಿಗಳು):

ಅ) ಪರ್ಯಾಯ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಉದ್ಭವಿಸುವುದಿಲ್ಲ.

ಇ) ಈ ವಿವರಗಳನ್ನು ಕೆಳಕಂಡಂತೆ ನೀಡಲಾಗಿದೆ:

ಸಂಖ್ಯೆ	ಯೋಜನೆಯ ಹೆಸರು	ಅನುದಾನ	31-1-1998ರವರೆಗೆ	
			ಬಿಡುಗಡೆಯಾದ ಹಣ	ಖರ್ಚಾದ ಹಣ
1)	ಯೋಜನಾ ಸಿಬ್ಬಂದಿ	241.65		201.72
2)	ಅಣೆಕಟ್ಟು ಮತ್ತು ಜಲಾಶಯ	200.00		26.19
3)	ಕಾಲುವೆ ಮತ್ತು ಉಪ ಕಾಲುವೆ	351.83		427.91
4)	ರಸ್ತೆಗಳು	30.00		12.53
5)	ಕೇಂದ್ರ ಯಾಂತ್ರಿಕ ಸಂಸ್ಥೆ	20.00	569.32	4.70
6)	ಕಟ್ಟಡಗಳು	40.00		117.28
7)	ಸಸ್ಪೆನ್ಸ್:			
ಅ)	ನಿಶ್ವಯ	560.00		71.29
ಆ)	ಪ್ರತ್ಯಯ(-)	560.00		(-)51.95
8)	ಯಂತ್ರಸಾಮಗ್ರಿ ಸಲಕರಣೆ	128.00		27.61
9)	ಬಂಡವಾಳ ಮೊತ್ತದ ಮೇಲಿನ ವಸೂಲಿ(-)	11.48		(-) 12.20
	ಒಟ್ಟು	1000.00	569.32	825.08

ಈ) ಹೀರೇಕೆರೂರು ತಾಲ್ಲೂಕಿನ ಒಟ್ಟು 11052 ಹೆಕ್ಟೇರ್ ಪ್ರದೇಶ ನೀರಾವರಿ ಒಳಪಡಿಸಲು ಉದ್ದೇಶಿಸಲಾಗಿದೆ. ಗ್ರಾಮವಾರು ವಿವರಗಳು ಸರ್ವೇಕ್ಷಣೆ ಕಾರ್ಯ ಪೂರ್ಣಗೊಂಡ ನಂತರ ಲಭ್ಯವಾಗುವುದು.

ಭಾರವಾಡ ವಿಭಾಗದಲ್ಲಿನ ಕೆರೆಗಳ ವಿವರ